(೪) ಜಮಖಂಡಿ ತಾಲ್ಲೂಕಿನ ಹೊಸೂರು ಗ್ರಾಮದ ಶ್ರೀ ಮಲ್ಲಪ್ಪ ಲಕ್ಕಪ್ಪ ಡಂಕಿ ಎಂಬುವರ ನಿಘೂಢ ಸಾವು

ಶ್ರೀ ಜೆ. ಸ್ವಾಮಿರಾವ್.—ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹೊಸೂರು ಗ್ರಾಮದ ನಿವಾಸಿ ಶ್ರೀ ಅಲ್ಲಪ್ಪ ಬಸಪ್ಪ ತೇಲಿ ಅವರ ಆಳಿಯ ಸುಮಾರು ೧೪ ವರ್ಷ ವಯಸ್ಸಿನ ಬಾಲಕ ಶ್ರೀ ಮಲ್ಲಪ್ಪ ಲಕ್ಕಪ್ಪ ಡಂಕಿ ಅವನನ್ನು ೨೭-೫-೧೯೮೫ರಂದು ಎಂ.ಟಿ.ಕೆ. ೮೫೫೫೫ನೇ ನಂಬರಿನ ಜೀಪಿನಲ್ಲಿ ಹೊಸೂರು ಗ್ರಾಮದ ಕೆ.ಇ.ಬಿ ಯಲ್ಲಿ ಸೆಕ್ಷನ್ ಆಫೀಸರ್ ಆಗಿರುವ ಶ್ರೀ ಶೀವಿ ಶಿವಸೂಜಿ ಎಂಬುವರು ಅವರ ಸಂಗಡಿಗರೊಡನೆ ಅಪಹರಿಸಿ ತೆಗೆದುಕೊಂಡು ಹೋಗಿ ವಿಷಪ್ರಾಶನ ಮಾಡಿಸಿ ಅವನ ಮೇಲೆ ಕಳ್ಳತನದ ಆಪಾದನೆ ಹೊರಿಸಿ ಮೃತಪಟ್ಟಿರುವುದಕ್ಕೆ ಕಾರಣರಾಗಿದ್ದು ಈ ಬಗ್ಗೆ ಮೇಲ್ಕಂಡ ಅಲ್ಲಪ್ಪ ಬಸಪ್ಪ ತೇರಿ ಅವರು ೧-೬-೧೯೮೫ ರಂದು ಬನಹಟ್ಟಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು, ಯಾವ ಕ್ರಮವನ್ನೂ ಕೈಗೊಳ್ಳದಿರುವುದರಿಂದ ಪುನಃ ೯-೮-೧೯೮೫ರಂದು ಫಿರ್ಯಾದು ಸಲ್ಲಿಸಿ ತನಿಖೆ ನಡೆಸುವಂತೆ ಕೋರಿದ್ದಾಗ್ಯೂ ಯಾವ ಕ್ರಮವನ್ನೂ ಕೈಗೊಳ್ಳದಿದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ಗೃಹ ಮಂತ್ರಿಗಳಿಗೆ ವಿದ್ಯುತ್ ಮಂತ್ರಿಗಳಿಗೆ ಪಂತ್ರು ಪೋಲೀಸ್ ವರಿಷ್ಠ ಅಧಿಕಾರಿಗಳಿಗೆ ಕೆ.ಇ.ಬಿ. ಚೇರ್ಮನ್ ಹಾಗೂ ಮುಖ್ಯ ಇಂಜಿನಿಯರುಗಳಿಗೆ ಮನವಿ ಸಲ್ಲಿಸಿ ಸದರಿ ಶಿವಪೂಜಿಯವರ ಮೇಲೆ ಕ್ರಮ ಕೈಕೊಳ್ಳುವಂತೆ ಕೋರಿ ಮೇಲ್ಕಂಡ ಬಸಪ್ಪ ತೇಲಿಯವರು ಮನವಿ ಸಲ್ಲಿಸಿದ್ದಾಗ್ಯೂ ಇದುವರೆವಿಗೂ ಯಾವ ಕ್ರಮ ಕೈಗೊಂಡಿಲ್ಲ. ಶ್ರೀ ಅಲ್ಲಪ್ಪ ಬಸಪ್ಪ ಅವರ ಪ್ರಾಣಕ್ಕೂ ಮತ್ತು ಆಸ್ತಿಪಾಸ್ತಿಗಳಿಗೆ ಅಪಾಯವಿದ್ದು ಆರೋಪಿತರು ಅಗರ್ಭ ಶ್ರೀಮಂತರಿದ್ದು ಪೋಲೀಸ್ ನೌಕರರು ಹಾಗೂ ಇತರರ ಮೇಲೆ ಪ್ರಭಾವ ಬೀರುತ್ತಿರುವುದರಿಂದಲೂ ಬಹು ಹಿಂದುಳಿದ ವರ್ಗಕ್ಕೆ ಸೇರಿರುವ ರೈತರಾಗಿರುವ ಬಸಪ್ಪತೇಲಿಯವರ ತೋದರೆಯನ್ನು ತಪ್ಪಿಸುವ ಸಲುವಾಗಿ ಕೂಡಲೇ ಆರೋಪಿಯ ಮೇಲೆ ಕ್ರಮ ಕೈಕೊಳ್ಳುವುದಲ್ಲದೆ ಆರೋಪಿಗೆ ಸಹಾಯ ನೀಡುತ್ತಿರುವ ಎಲ್ಲ ಅಧಿಕಾರವರ್ಗದವರನ್ನು ಪತ್ತೆ ಹಚ್ಚಿ ಅವರ ಮೇಲೂ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ವಿವರಗಳು ನನ್ನ ಹತ್ತಿರ ವಿಲ್ಲ. ಅದನ್ನು ತರಿಸಿಕೊಡುತ್ತೇನೆ.

ಶ್ರೀ ಜಿ ಸ್ವಾಮಿರಾವ್.—ನನ್ನ ಹತ್ತಿರ ಒಂದು ಹೊರೆ ವಿವರಗಳು ಇವೆ. ಅದನ್ನು ಬೇಕಾದರೆ ತಮ್ಮ ಹತ್ತಿರ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ರಾಚಯ್ಯ —ನೀವು ಕೊಡುವಂತಹ ಅರ್ಜಿಯ ಮೇಲೆ ಕ್ರಮ ತೆಗೆದುಕೊಂಡಿದ್ದಕ್ಕೆ ವರದಿ ಕೇಳಿದ್ದರೆ, ಅದು ಬಂದ ಮೇಲೆ ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿರಾವ್ ಹೇಳಿದ್ದು ಏನೆಂದರೆ ವಿವರವನ್ನು ತಮ್ಮ ಹತ್ತಿರ ಕಳುಹಿಸಿಕೊಡುತ್ತೇನೆಂದು ಹೇಳಿದರು. ಇದರಿಂದ ನಿಮಗೆ ಕಂಡುಹಿಡಿಯುವುದಕ್ಕೆ ಅನುಕೂಲ ವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಕಳುಹಿಸಿಕೊಡಿ.

(೫) ಬೆಂಗಳೂರು ರೈವಿನ್ಯೂ ಸೈಟುಗಳ ಮೇಲೆ ವಿಧಿಸಿರುವ ಪರಿವರ್ತನಾ ಶುಲ್ಕದ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಮಂತ್ರಿಗಳು ನನ್ನ ಸೂಚನೆಗೆ ಉತ್ತರ ಕೊಟ್ಟಿಲ್ಲ. ಸನ್ಮಾನ್ಯ ಸಚಿವರು ಉತ್ತರ ನೀಡಲು ಈ ಸಭೆಯಲ್ಲಿ ಇಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಅದರಲ್ಲಿ ಅರ್ಥವಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ನಾವು ಈ ವಿಷಯವನ್ನು ಪ್ರಸ್ತಾವನೇ ಮಾಡುವುದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು.—ಬೇರೆ ಮಂತ್ರಿಗಳು ಇದ್ದಾರೆ, ಅವರು ಉತ್ತರ ಕೊಡಬಹುದು.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಸರಹದ್ದಿನಲ್ಲಿರುವ ರೆವಿನ್ಯೂ ನಿವೇಶನಗಳ ಪರಿವರ್ತನಾ ಶುಲ್ಕವನ್ನು ಬಹಳ ಜಾಸ್ತಿ ಮಾಡಿರುವುದರಿಂದ ಬೆಂಗಳೂರಿನ ಸುತ್ತಮುತ್ತಲಿನ ರೆವಿನ್ಯೂ ನಿವೇಶನಗಳ ಪರಿವರ್ತನ ಶುಲ್ಕ ಜಾಸ್ತಿ ಮಾಡಿದ್ದರಿಂದ ರೆವಿನ್ಯೂ ನಿವೇಶನಗಳ ಮಾಲೀಕರು ಕಂಗಲಾಗಿದ್ದಾರೆ. ಅವರು ಕೊಂಡಿರುವ ಬೆಲೆಗಿಂತಲೂ ಜಾಸ್ತಿ ಹಣವನ್ನು ಈ ಪರಿವರ್ತನಾ ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕಾಗಿದೆ. ಇದರಿಂದ ರೆವಿನ್ಯೂ ನಿವೇಶನಗಳನ್ನು ಕೊಂಡಿರುವವರಿಗೆ ತುಂಬಾ ಅನ್ಯಾಯವಾಗಿದೆ. ಇದು ಜರೂರಾದ ಮತ್ತು ಮಹತ್ವರವಾದ ವಿಷಯ ವಾದ್ದರಿಂದ ಈ ಬಗ್ಗೆ ಸದನದ ಮುಂದೆ ತರುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಂಡು ಪರಿಹಾರವನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯವರು) (ಕಂದಾಯ ಮಂತ್ರಿಯವರ ಪರವಾಗಿ). -

ಕೃಷಿ ಜಮೀನಾನನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವ ಸಲುವಾಗಿ ಪರಿವರ್ತನ ಶುಲ್ಕ ಮತ್ತು ಓಟ್ಟುಗೂಡಿಸಿದ ಹಣವನ್ನು ವಿಧಿಸುವ ಮುಖ್ಯ ಗುರಿ ಏನೆಂದರೆ ಯಾರು ತಮ್ಮ ಜಮೀನನ್ನು ಅನಧಿಕೃತವಾಗಿ ಕೃಷಿಯೇತರ ಉದ್ದೇಶಗಳಿಗೆ ಉಪಯೋಗಿಸುವುದನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ ಇತರ ನಿಯಮಗಳನ್ನು ಉಲ್ಲಂಘಿಸಿದಾತವರನ್ನು ಅಧೈರ್ಯ ಗೊಳಿಸುವುದಾಗಿದೆ. ಪರಿಸರದ ಯೋಜನೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಇಂಥ ನಿರ್ಬಂಧನೆಯಾಂ ಯಾವ ಅಡೆ-ತಡೆಗಳಿಲ್ಲದೆ ಕೆಲಸ ನಡೆಯಲು ಅವಶ್ಯವಾಗಿರುತ್ತದೆ. ಈ ಹಿಂದೆ ಇಂತಹ ಅನಧಿಕೃತ ಪರಿವರ್ತನೆಗಳಿಂದ ಕಟ್ಟಿದ ಕಾಯ್ದೆ ಬಾಹಿರ ಕಟ್ಟಡಗಳನ್ನು ತ್ವರಿತವಾಗಿ ನಾಶಪಡಿಸುವ ಪ್ರಯತ್ನ ಗಳನ್ನು ಮಾಡಲಾಗಿತ್ತು. ಇಂತಹ ಪ್ರಯತ್ನಗಳು ಫಲಪ್ರಧವಾಗಲಿಲ್ಲ ಈ ಕಾಯ್ದೆ ಬಾಹಿರ ಕಟ್ಟಡಗಳು ಆಸ್ತಿ ನೋಂದಾಯಿಸುವ ಪುಸ್ತಕದಲ್ಲಿ ನಮೂದನೆಯಾಗುವುದಿಲ್ಲವಾದರಿಂದ ಕಾರ್ಪೋರೇಷನ್/ ನಗರಸಭೆ ಪುರಸಭೆಗಳಿಂದ ಆಸ್ತಿ ಶುಲ್ಕ,ನೀರಿನ ಕರ ಮತ್ತು ಇತರ ಸ್ಥಳೀಯ ಶುಲ್ಕಗಳನ್ನು ವಸೂಲಿ ಮಾಡಲು ಬರುವುದಿಲ್ಲ. ಆದರೂ ಇಂಥ ಪ್ರದೇಶಕ್ಕೆ ಮಾನವೀಯ ದೃಷ್ಟಿಯಿಂದ ಸಮಯ-ಸಮಯಕ್ಕೆ ಎಲ್ಲ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಬರು-ಬರುತ್ತಾ ಇಂತಹ ಅನಧಿಕೃತ ಕಟ್ಟಡಗಳ ಸಣ್ಣ ಗುಂಪುಗಳು ಕಾಯ್ದೆ ಚೌಕ್ಟಟಿನಲ್ಲಿ ಕಟ್ಟಿದಂತಹ ಕಟ್ಟಡಗಳಿಗೆ ಸರಿಸಮವಾಗಿ ಬಿಡುತ್ತವೆ. ಈ ಸೌಲಭ್ಯಗಳಿಗಾಗಿ ಆದ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರ ಹಾಗೂ ಸರಕಾರವೇ ವಹಿಸಿ ಕೊಳ್ಳಬೇಕಾಗುತ್ತದೆ. ಈ ರೀತಿ ಕಾಯ್ದೆ ಉಲ್ಲಂಘಿಸಿದವರು ದಂಡ ಕೊಡುವುದಕ್ಕಿಂತ ಹೆಚ್ಚಾಗಿ ಎಲ್ಲ ದೊರೆಯಬಹುದಾದ ಸೌಲಭ್ಯಗಳನ್ನು ಪಡೆಯುತ್ತಾರೆ. ಇದರ ಪರಿಣಾಮವಾಗಿ ಸ್ಥಳೀಯ ಸಂಸ್ಥೆಗಳು ಈ ಪರಿಸ್ಥಿತಿಯನ್ನು ಸರಿಪಡಿಸುವಲ್ಲಿ ಅಸಮರ್ಥವಾಗಿವೆ. ಕ್ರಮೇಣವಾಗಿ ಈ ಪರಿಸ್ಥಿತಿ ಉಲ್ಬಣ ವಾಗುತ್ತದೆ. ಈಗಾಗಲೇ ಬೆಂಗಳೂರು ಮೆಟ್ರೊಪೋಲಿಟನ್ ಪ್ರದೇಶದ ಒಂದರಲ್ಲಿಯೇ ವ್ಯವಸಾಯದ ಜಮೀನಿನಲ್ಲಿ ಬಹಳಷ್ಟು ಅನಧಿಕೃತವಾಗಿ ಕಟ್ಟಿದ ಕಟ್ಟಡಗಳು ಇರುತ್ತವೆ ಒಂದು ವೇಳೆ ಇಂತಹ ಪರಿಸ್ಥಿತಿಯನ್ನು ಮುಂದುವರಿಯಲು ಬಿಟ್ಟರೆ ಕಾರ್ಪೊರೇಷನ್/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಿಗೆ ಕೆಲಸ ಕೈಗೊಳ್ಳಲಂ ಈಗಿದ್ದಕ್ಕಿಂತ ಇನ್ನಷ್ಟು ತೊಂದರೆಯಾಗುತ್ತದೆ ಒಂದು ವೇಳೆ ಇಂತಹ ಅನಧಿಕೃತ ಕಟ್ಟಡಗಳ ಸಣ್ಣ ಗುಂಪುಗಳಿಗೆ ವಿದ್ಯುತ್ ಪೂರೈಕೆ, ನೀರು ಸರಬರಾಜು, ರಸ್ತೆ ಚರಂಡಿಗಳು ಶಾಲೆಗಳು, ವೈದ್ಯಕೀಯ ಸೇವೆಗಳು ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಸರಕಾರವು ತುಂಬಾದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೯೬ಕ್ಕೆ ತಿದ್ದುಪಡಿಯನ್ನು ಸಾಗ್ರೀವಾಜ್ಞೆ ಮೂಲಕ ದಿನಾಂಕ ೮–೬–೧೯೮೫ರಂದು ಜಾರಿಗೊಳಿಸಲಾಯಿತು ಮತ್ತು ಅದು ದಿನಾಂಕ ೨೭–೪–೧೯೮೫ರಂದು ಕಾಯ್ದೆಯಾಯಿತು. ಒಟ್ಟುಗೂಡಿಸಿದ ಹಣವನ್ನು ಸದರಿ ತಿದ್ದುಪಡಿಯನ್ವಯ ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೯೬ರ ಉಪ ಕಲಂಗಳ ಕೆಳಗೆ ವಿಧಿಸಲಾಗುತ್ತದೆ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೬ರ ಹೊಸ ನಿಯಮ ೧೦೭–ಎ ಅದನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

ಕ್ರಮ ಸಂಖ್ಯೆ	ಸ್ಥಳ	ಪ್ರದೇಶ	ಒಂದು ಚದುರ ಅಡಿಯ ದರ ರೂ.ಗಳಲ್ಲಿ	
			ನಿವಾಸಕ್ಕಾಗಿ	ನಿವಾಸೇತರಕ್ಕಾಗಿ
೧	೨	೩	೪	೫
೧ಎ.	ಬೆಂಗಳೂರು	ಮುನಿಸಿಪಾಲಿಟಿ ಕಾರ್ಪೋರೇಷನ್ ಮಿತಿ ಮತ್ತು ಕಾರ್ಪೋರೇಷನ್ ಮಿತಿಯ ೧೮ ಕಿ.ಮಿ. ಒಳಗಿನ ಎಲ್ಲ ಜಮೀನು.	೧೧–೫೦	೫೭–೫೦
೨	ಮೈಸೂರು ಹುಬ್ಬಳ್ಳಿ ಧಾರವಾಡ ಮಂಗಳೂರು ಮತ್ತು ಬೆಳಗಾಂ	ಮುನಿಸಿಪಾಲಿಟಿ ಕಾರ್ಪೋರೇಷನ್ ಮಿತಿ ಮತ್ತು ಕಾರ್ಪೋರೇಷನ್ ಮಿತಿಯ ೮ ಕಿ.ಮಿ. ಒಳಗಿನ ಎಲ್ಲ ಜಮೀನು.	೭–೦೦	೩೪–೫೦
೩	ಗುಲ್ಬರ್ಗ ದಾವಣಗೆರೆ ಶಿವಮೊಗ್ಗ ಭದ್ರಾವತಿ ಬಳ್ಳಾರಿ ಮತ್ತು ಬಿಜಾಪುರ	ಮುನಿಸಿಪಾಲಿಟಿ ಮಿತಿ ಮತ್ತು ಮುನಿಸಿಪಾಲಿಟಿ ಮಿತಿಯ ೮ ಕಿ.ಮೀಟರ್ ಒಳಗಿನ ಎಲ್ಲ ಜಮೀನು.	೫–೭೫	೨೮–೭೫
೪	ಇತರ ಜಿಲ್ಲಾ ಮುಖ್ಯ ಕೇಂದ್ರಗಳು ಮತ್ತು ಗದಗ, ದಾಂಡೇಲಿ ಕೋಲಾರ, ಗೋಲ್ಡ್‌ಫೀಲ್ಡ್ ಹೊಸಪೇಟೆ ಮತ್ತು ಬಾಗಲಕೋಟೆ.	ಮುನಿಸಿಪಾಲಿಟಿ ಮಿತಿ ಮತ್ತು ಮುನಿಸಿಪಾಲಿಟಿ ಮಿತಿಯ ೫ ಕಿ.ಮೀಟರ್ ಒಳಗಿನ ಎಲ್ಲ ಜಮೀನು.	೩–೦೦	೧೪–೫೦
೫	ಇತರ ಸ್ಥಳಗಳು	...	೦–೭೫	೧–೨೦

೧ ಚದುರ ಮೀಟರ್–೧೦.೭೬ ಚದುರ ಅಡಿಗಳು

ದೊಡ್ಡ ಪಟ್ಟಣ/ನಗರಗಳಲ್ಲಿ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿಯ ಈ ಅಹಿತಕರ ಘಟನೆಗಳನ್ನು ತಡೆಗಟ್ಟುವ ಉದ್ದೇಶದಿಂದ ಮಾತ್ರ ಸದರಿ ತಿದ್ದುಪಡಿಯನ್ನು ಮಾಡಲಾಗಿದೆ. ಆದರೆ

ಈ ಕಾನೂನು ರೈತರ ತಮ್ಮ ಕೃಷಿ ಜಮೀನಿನಲ್ಲಿ ಸ್ವಂತ ಉಪಯೋಗಕ್ಕಾಗಿ ಕಟ್ಟಿದ ಮನೆಗಳಿಗೆ ಅಥವಾ ಕಟ್ಟಬೇಕೆಂದಿರುವ ಮನೆಗಳಿಗೆ ಅನ್ವಯವಾಗುವುದಿಲ್ಲ. ಆದರೂ ಕೂಡ ಈ ವಿಷಯಗಳಲ್ಲಿ ಸರ್ಕಾರಕ್ಕೆ ಬಹಳಷ್ಟು ಮನವಿಗಳು ಬಂದಿರುತ್ತವೆ. ಈ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮಗೆ ಉತ್ತರ ಬಂದಿತೇ ಬಹಳ ಕೂಗಾಡಿದಿರಲ್ಲ ?

ಶ್ರೀ ಆರ್. ಎಸ್. ನಾಯಕ್.—ನಾನು ಕ್ರಿಯಾಲೋಪ ಎತ್ತುತ್ತೇನೆ. ಮಾನ್ಯ ಸಚಿವರು ಬಳಸಿದ ಪದಗಳು ಬಹಳ ಕಟ್ಟದ್ದು ಇದೆ. ಮಾನ್ಯ ಸದಸ್ಯರೊಬ್ಬರ ಮೇಲೆ ಕೂಗಾಡಿದರು ಎಂದು ಹೇಳಿದರೆ ಅದರ ಅರ್ಥ ಏನು ? ಕಾನೂನು ಮಂತ್ರಿಗಳು ಬಳಸಿದ ಪದಗಳು ಸರಿಯಿಲ್ಲವೆಂದು ತಾವು ಆದೇಶ ಕೊಡಿ, ಇಲ್ಲದೇ ಹೋದರೆ ಹೇಳಿದ್ದು ತಪ್ಪೆಂದು ಆದೇಶಕೊಡಿ, ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ನಾಯಕರೇ ನೀವು ಕುಳಿತುಕೊಳ್ಳಿ.

ಶ್ರೀ ಆರ್. ಎಸ್. ನಾಯಕ್.—ನಾನು ಹೇಳಿದ್ದು ತಪ್ಪು ಎಂದು ತಾವು ಆದೇಶ ಕೊಡಿ ಆಗ ನಾನು ಕುಳಿತುಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಸದಸ್ಯರೊಬ್ಬರ ಮೇಲೆ ಕೂಗಾಡುತ್ತಿದ್ದಾರೆ ಎಂಬ ಭಾಷೆಯನ್ನು ಉಪಯೋಗಿಸಬಾರದು ಸರಿಯಲ್ಲ.

ಅಧ್ಯಕ್ಷರು.—ನಾನು ಆ ಬಗ್ಗೆ ಲಕ್ಷ್ಯ ಕೊಡಲಿಲ್ಲ. ಆ ಬಗ್ಗೆ ನಾನು ರೆಕಾರ್ಡ್ ತರಿಸಿ ನೋಡುತ್ತೇನೆ. ತಾವು ಕುಳಿತುಕೊಳ್ಳಿ.

(ಗೊಂದಲ)

ನಾಯಕ್ ಅವರೇ, ನೀವು ಕೂತುಕೊಳ್ಳಿ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅದನ್ನು ನೋಡೋಣ ತಾವು ಕುಳಿತುಕೊಳ್ಳಿ.[ಇಂಗ್ಲಿಷ್]

ಶ್ರೀ ಆರ್. ಎನ್ ನಾಯಕ್.—ಸಭೆಯಲ್ಲಿ ಅವರು ಆ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಕೂಗಾಡಿದ್ದು ಎನ್ನುವ ಶಬ್ದ ಏನು ಇದೆ...

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಲಕ್ಷ್ಮೀಸಾಗರ್ ಅವರು ಪ್ರೊಫೆಸರ್ ಆಗಿದ್ದಾರೆ ನಿಯಮ ೬೫ರ ಕೆಳಗೆ ಸಂಬಂಧಪಟ್ಟ ಮಂತ್ರಿಗಳು ಹಾಜರಿ ಇಲ್ಲ ಎಂದು ಹೇಳಿದರು. ಹಾಗೂ ಸರ್ಕಾರದ ವತಿಯಿಂದ ಉತ್ತರ ಕೊಡುತ್ತಿದ್ದೇವೆಂದು ಹೇಳಿದರು. ಕೂಗಾಡಿದರು ಎಂದರೆ ಏನು ? ನಾನೂ ಕೂಡಾ ಆ ಕಡೆ ಇದ್ದೆ. ಆ ರೀತಿ ಅವರು ಶಬ್ದ ಬಳಸತಕ್ಕದ್ದು ಸರಿಯಲ್ಲ. ಯಾವಾಗಲೂ ಕೂಡ ಅವರು ಈ ರೀತಿ...

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಕೇಳಿ ಸ್ವಾಮಿ. ನಾನು ಆ ವಿಷಯದ ಬಗ್ಗೆ ಉತ್ತರ ಕೊಡಲು ರೆಡಿಯಾಗಿದ್ದೇನೋ ಇಲ್ಲವೋ ? ಸುಮ್ಮನೆ ಆ ರೀತಿ ಮಾತನಾಡಿದರೆ ಏನು ಪ್ರಯೋಜನ ?

ಶ್ರೀ ಎಂ. ರಘುಪತಿ.—ಇದು ಬಹಳ ಸಣ್ಣ ವಿಷಯ. ಈ ಬಗ್ಗೆ ಇಷ್ಟು ಉದ್ವೇಗ ಬೇಡ ಕೂಗಾಡಿದರು ಎನ್ನುವುದು ಅನ್‌ಪಾರ್ಲಿಮೆಂಟರಿ ಅಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ನನ್ನ ಧ್ವನಿ ಹಾಗೆ ಇದೆ. ಅದು ಗಾಡ್ ಗಿಫ್ಟ್. ನನಗೆ ನಿಮ್ಮ ಹಾಗೆ ಧ್ವನಿ ಇಲ್ಲ. ಅಧ್ಯಕ್ಷರೇ....

ಶ್ರೀ ಎಂ. ರಘುಪತಿ.—ಅದು ಅವರ ಗಾಡ್ ಗಿಫ್ಟ್ ಎಂದು ಹೇಳಿದರು. ಇನ್ನು ಈ ಬಗ್ಗೆ ಮುಂದುವರಿಸುವುದು ಏಕೆ ?

ಅಧ್ಯಕ್ಷರು.—ಮಾತನಾಡುವುದು, ಕೂಗಾಡುವುದು, ಇವೆಲ್ಲಾ ಒಂದೇ. ಈಗ ಮುಂದಿನ ವಿಷಯಕ್ಕೆ ಹೋಗೋಣ.